# ರಂಗಭೂಮಿ ಮತ್ತು ಚಲನಚಿತ್ರ: ಅಭಿವ್ಯಕ್ತಿ, ತಂತ್ರಜ್ಞಾನ ಹಾಗೂ ಸಾಂಸ್ಕೃತಿಕ ಪರಿವರ್ತನೆ ಒಂದು ತುಲನಾತ್ಮಕ ಅಧ್ಯಯನ

ಪ್ರದೀಪ ಬಿ.*

DOI: https://doi.org/10.5281/zenodo.22106912

**ABSTRACT**

ರಂಗಭೂಮಿ ಮಾನವ ನಾಗರಿಕತೆಯ ಅತ್ಯಂತ ಪ್ರಾಚೀನ ಕಲಾ ಮಾಧ್ಯಮಗಳಲ್ಲಿ ಒಂದಾಗಿದ್ದು, ಭಾರತೀಯ ಸಂದರ್ಭದಲ್ಲಿ ಭರತನ ನಾಟ್ಯಶಾಸ್ತ್ರ ಅದರ ಸೈದ್ಧಾಂತಿಕ ಅಡಿಪಾಯವಾಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಜಾನಪದ ದೃಷ್ಟಿಯಿಂದ ನೋಡಿದರೆ ಮಾನವ ತನ್ನ ದೈನಂದಿನ ದುಡಿಮೆ, ಏಕತಾನತೆ, ಆತಂಕ, ಬದುಕಿನ ಒತ್ತಡದಿಂದ ಹೊರಬರಲು ರೂಪಿಸಿಕೊಂಡ ಆನಂದದ ವಿಧಾನಗಳು ಕಾಲಕ್ರಮೇಣ ಬೇರೆ ಸನ್ನಿವೇಶಗಳ ಪರಿಷ್ಕರಣೆಯಿಂದ ಸಂಸ್ಕೃತಿ, ನಂಬಿಕೆ, ಕಲ್ಪನೆ, ಸಾಮಾಜಿಕ ಸಂಬಂಧಗಳ ಅಭಿವ್ಯಕ್ತಿಯ ರೂಪವಾಗಿ ಹುಟ್ಟಿಕೊಂಡ ಕಲಾ ಮಾಧ್ಯಮಗಳಲ್ಲಿ ಒಂದು ಎಂದೂ ಪರಿಗಣಿಸಬಹುದು. ಈ ಪ್ರಬಂಧವು ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳಲ್ಲಿ ರಂಗಭೂಮಿ ಮತ್ತು ಚಲನಚಿತ್ರ ಮಾಧ್ಯಮಗಳ ನಡುವಿನ ಅಭಿವ್ಯಕ್ತಿ, ಕಲಾತ್ಮಕ ಸ್ವರೂಪ, ಪ್ರೇಕ್ಷಕ–ಕಲಾವಿದರ ಸಂಬಂಧ, ಕಥಾವಿನ್ಯಾಸ, ಪಾತ್ರ ಚಿತ್ರಣ, ಸಂಗೀತ, ಸಾಹಿತ್ಯ, ತಾಂತ್ರಿಕ ಬೆಳವಣಿಗೆ, ಆರ್ಥಿಕ ವಿನ್ಯಾಸ ಹಾಗೂ ಸಾಮಾಜಿಕ ಹೊಣೆಗಾರಿಕೆಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸುವ ಪ್ರಯತ್ನವಾಗಿದೆ. ಜಾನಪದ, ರಂಗರೂಪಗಳಿಂದ ಹಿಡಿದು ವೃತ್ತಿರಂಗಭೂಮಿಯ ವರೆಗಿನ ಸುದೀರ್ಘ ಚಲನಶೀಲ ಪರಂಪರೆಯಲ್ಲಿ ಸಾಗುತ್ತ 20ನೇ ಶತಮಾನದ ಆರಂಭದ ಹೊತ್ತಿಗೆ ಚಲನಚಿತ್ರ ಮಾಧ್ಯಮದ ಹುಟ್ಟಿನಿಂದ ಸಂಭವಿಸಿದ ಪರಿವರ್ತನೆಗಳು, ವಾಣಿಜ್ಯೀಕರಣ, ಪ್ರೇಕ್ಷಕರ ಮನೋಭಾವಗಳು ಹಾಗೆಯೇ ಇಂದಿನ ಡಿಜಿಟಲ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆಯ ಪ್ರಭಾವ ಇತ್ಯಾದಿಗಳನ್ನು ಪರಿಶೀಲಿಸುವ ಪ್ರಯತ್ನ ಇಲ್ಲಿದೆ. ರಂಗಭೂಮಿ ಮತ್ತು ಚಲನಚಿತ್ರಗಳನ್ನು ಕೇವಲ ವೇದಿಕೆ ಹಾಗೂ ತೆರೆ ಎಂಬ ಭೌತಿಕ ವ್ಯತ್ಯಾಸದ ದೃಷ್ಟಿಯಿಂದ ಮಾತ್ರ ಪರಿಶೀಲಿಸದೆ ರಂಗಭೂಮಿಯ ನಟನೆಯ ಜೀವಂತಿಕೆ ಮತ್ತು ಚಲನಚಿತ್ರದ ಮರುಸೃಷ್ಟಿ ಯಾವ ರೀತಿ ಸಾಕಾರಗೊಂಡಿದೆ ಎಂಬುದನ್ನು ಪರಿಶೀಲಿಸಿದೆ. ಈ ಪ್ರಬಂಧವು ರಂಗಭೂಮಿ ಮತ್ತು ಚಲನಚಿತ್ರಗಳ ನಡುವಿನ ಸಾಮ್ಯತೆ ಹಾಗೂ ಭಿನ್ನತೆಗಳನ್ನು ಮಾತ್ರ ಗುರುತಿಸದೇ ಬದಲಾಗುತ್ತಿರುವ ಸಂಬಂಧ ಸಮಕಾಲೀನ ಸವಾಲುಗಳು ಮತ್ತು ಭವಿಷ್ಯದ ಸಾಧ್ಯತೆಗಳ ಬಗ್ಗೆಯೂ ವಿಮರ್ಶಿಸುತ್ತದೆ. ಈ

* **ಪ್ರದೀಪ ಬಿ.,** ಸಹಾಯಕ ಪ್ರಾಧ್ಯಾಪಕರು, ಕೆನರಾ ಕಾಲೇಜು (ಸ್ವಾಯತ್ತ), ಮಂಗಳೂರು.

ಕಾರಣದಿಂದಾಗಿ ಪ್ರಸ್ತುತ ಅಧ್ಯಯನ ಕೇವಲ ಸಾಂಪ್ರದಾಯಿಕ ಹೋಲಿಕೆಗಳಿಗೆ ಸೀಮಿತವಾಗದೆ ಇಂದಿನ ಶತಮಾನದ ಸಾಮಾಜಿಕ, ಸಾಂಸ್ಕೃತಿಕ ಪರಿವರ್ತನೆಗಳನ್ನು ಪರಿಶೀಲಿಸುತ್ತದೆ. ಸಾಮ್ಯತೆ, ವೈರುಧ್ಯ ಮತ್ತು ಪರಸ್ಪರ ಪ್ರಭಾವಗಳ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಕೊನೆಯಲ್ಲಿ ಇವೆರಡೂ ಪರಸ್ಪರ ವಿರೋಧಿಗಳಲ್ಲ. ಒಂದರಿಂದ ಇನ್ನೊಂದು ಪ್ರಭಾವಿಸಲ್ಪಟ್ಟು ರೂಪುಗೊಂಡ ಹಾಗೆಯೇ ರೂಪಾಂತರಿಸುತ್ತಿರುವ ಕೊಡುಕೊಳ್ಳುಗೆಯ ಕಲಾ ಮಾಧ್ಯಮಗಳು ಎಂಬ ನಿರ್ಣಯಕ್ಕೆ ಈ ಪ್ರಬಂಧವು ಬರುತ್ತದೆ.

**KEYWORDS:** ರಂಗಭೂಮಿ, ಚಲನಚಿತ್ರ, ತಂತ್ರಜ್ಞಾನ, ಸಾಂಸ್ಕೃತಿಕ ಪರಿವರ್ತನೆ.

ಡಾ. ಎಚ್.ಕೆ. ರಂಗನಾಥ್ ರವರ ಕರ್ನಾಟಕ ರಂಗಭೂಮಿ ಎಂಬ ತಮ್ಮ ಕೃತಿಯಲ್ಲಿ "ರಂಗಭೂಮಿ, ಹಲವಾರು ಲಲಿತ ಕಲೆಗಳ ಸಂಗಮ ಕ್ಷೇತ್ರ" ಎಂದು ಹೇಳಿದ್ದಾರೆ. ಸಾಹಿತ್ಯ, ಸಂಗೀತ, ನೃತ್ಯ, ಚಿತ್ರ, ಶಿಲ್ಪ ಅಭಿನಯಗಳ ಮೇಳೈಸಿ ನವರಸಗಳನ್ನು ಸಮಚಿತ್ತದಿಂದ ಎರಕ ಹೊಯ್ದ ದೃಶ್ಯ ಕಾವ್ಯ ಎಂಬುದು ಅವರ ಅಭಿಪ್ರಾಯ. ಅದು ಹುಟ್ಟಿದ್ದು ಮನರಂಜನೆಗಾದರೂ ಕೇವಲ ಅದೇ ಉದ್ದೇಶವಾಗಿರದೆ ಸಮಾಜದ ನೈತಿಕತೆ, ಸಂಸ್ಕೃತಿ, ರಾಜಕೀಯ ಮತ್ತು ಮಾನವಿಕ ನೆಲೆಗಳನ್ನು ಅನ್ವೇಷಿಸುವ ಜೀವಂತ ಕಲೆ ರಂಗಭೂಮಿ ಇಲ್ಲಿ ಕಲಾವಿದ ಹಾಗೂ ವೀಕ್ಷಕರ ಮಧ್ಯೆ ಪ್ರತ್ಯಕ್ಷ ಸಂಬಂಧವಿದೆ. ಮಾನವನ ಜ್ಞಾನಮಟ್ಟ ಸಾಮುದಾಯಿಕ ಬಂಧಗಳು, ಮನೋಸಂವೇದನೆ, ವಿಸ್ತರಣಾ ಶಕ್ತಿ, ಇತ್ಯಾದಿಗಳನ್ನು ದೃಶ್ಯ ಹಾಗೂ ಶ್ರವಣ ರೂಪಗಳಲ್ಲಿ ಅಭಿವ್ಯಕ್ತಿಸಿದ ಕಲಾ ಮಾಧ್ಯಮವಾಗಿ ರಂಗಭೂಮಿ ರೂಪುಗೊಂಡಿತು. 20ನೇ ಶತಮಾನದ ಆರಂಭದಲ್ಲಿ ಇದನ್ನು ವಿರೋಧಿಸಲು ಎಂದು ಹೇಳಲಾಗದಿದ್ದರೂ ಭಿನ್ನವಾಗಿ ಪ್ರಕಟಗೊಂಡ ಕಲಾ ಮಾಧ್ಯಮ ಚಲನಚಿತ್ರ ಕಾಲ ಮತ್ತು ದೇಶಗಳ ಭೌತಿಕ ಸಾಮೀಪ್ಯದಲ್ಲಿ ಅಂದರೆ ಕಲಾವಿದ ಮತ್ತು ಸಹೃದಯದನ ನೇರ ಮುಖಾಮುಖಿಯಲ್ಲಿ ರಂಗಭೂಮಿ ಇದ್ದರೆ, ತಂತ್ರಜ್ಞಾನದ ಉಪಸ್ಥಿತಿಯಲ್ಲಿ ಕ್ಯಾಮೆರಾ, ಬೆಳಕು, ಶಬ್ದಗ್ರಹಣ, ಸಂಕಲನಗಳ ಮೂಲಕ ಪುನರುತ್ಪಾದನೆಯಿಂದ ಚಲನಚಿತ್ರ ಪ್ರೇಕ್ಷಕ ವರ್ಗಕ್ಕೆ ಪ್ರಮುಖ ಮನರಂಜನೆಯ ಕಲಾ ಮಾಧ್ಯಮವಾಗಿ ಬೆಳೆಯಿತು. ಆದ್ದರಿಂದ ರಂಗಭೂಮಿ ಜೀವಂತ ಕಲೆಯಾದರೆ, ಚಲನಚಿತ್ರ ದೃಶ್ಯ ದಾಖಲೆಯ ಕಲೆ ಎಂಬ ತೀರ್ಮಾನಕ್ಕೆ ಬರಬಹುದು.

ಜರ್ಮನ್ ತತ್ವಜ್ಞಾನಿ ವಾಲ್ಟರ್ ಬೆಂಜಮಿನ್ ಅವರ ಮಾಧ್ಯಮ ಸಿದ್ಧಾಂತವು ಕಲೆ ಮತ್ತು ತಂತ್ರಜ್ಞಾನದ ಸಂಬಂಧವನ್ನು ವಿವರಿಸಿದಲ್ಲದೇ ಚಲನಚಿತ್ರದಂತಹ ಮಾಧ್ಯಮವು ಕಲೆಯ ಮೂಲ ರೂಪವನ್ನು ಹಾಗೂ ಅನನ್ಯತೆಯನ್ನು ಹೇಗೆ ಬದಲಾಯಿಸುತ್ತದೆ ಎಂಬುದರ ಬಗ್ಗೆ ವಿಶ್ಲೇಷಣೆ ಇದೆ. (ಮೂಲ ಕೃತಿಯಲ್ಲಿರುವ ದೈವಿಕತೆ, ಸಾಮೂಹಿಕ ಗ್ರಹಿಕೆ ಸಿನಿಮಾ ಮಾನವ ಗ್ರಹಿಕೆಯ ಬದಲಾವಣೆ ಸಂವೇದನೆ ಮತ್ತು ಗ್ರಹಿಕಾಶಕ್ತಿ ಬದಲಾವಣೆ) ಯಾಂತ್ರಿಕ ಪುನರುತ್ಪಾದನೆಯ ಯುಗದಲ್ಲಿ ಕಲೆಯು ಮೂಲ ಭೌತಿಕ ಧಾತುವನ್ನು ಕಳೆದುಕೊಂಡರೂ, ಅದು ಹೇಗೆ ಪ್ರಜಾಸತ್ತಾತ್ಮಕ ಸ್ಥಾನವನ್ನು ಪಡೆಯುತ್ತದೆ ಎಂಬುದನ್ನು ವಿವರಿಸುತ್ತಾರೆ. ಇದನ್ನು ಗಮನಿಸಿದಾಗ ಒಂದು ವಿಚಾರ ಸ್ಪಷ್ಟವಾಗುತ್ತದೆ. ಕಲೆಗೆ ಚಲನಾಶೀಲತೆಯ ಗುಣವಿದ್ದು, ಎಲ್ಲವನ್ನೂ ಎಲ್ಲರನ್ನೂ ಒಳಗೊಳ್ಳುವ ಉದಾರಗುಣಸ್ಥಾಯಿ ಇದೆ ಎಂಬುದು. ಡಾ. ಎಚ್. ಕೆ. ರಂಗನಾಥ್ ಅವರ ಸಂಶೋಧನೆ ಹೇಳುವಂತೆ ರಂಗಕಲೆಯ ಪ್ರಾಚೀನತೆಯ ಬಗ್ಗೆ ಇದಮಿತ್ಥಂ ಎಂದು ಹೇಳಲಾಗದಿದ್ದರೂ ಹತ್ತನೆಯ ಶತಮಾನದ ಶಾಸನ, ಸಾಹಿತಿ ಆಧಾರಗಳಿಂದ ಆ

ಕಾಲದಲ್ಲೇ ರಂಗಕಲೆಯ ಪರಂಪರೆ ಪ್ರಚಲಿತವಿತ್ತು ಎಂದು ಕಂಡು ಬರುತ್ತದೆ.

17ನೇ ಶತಮಾನದ ಸಿಂಗರಾರ್ಯನ ಮಿತ್ರವಿಂದಗೋವಿಂದ ನಾಟಕದಿಂದ ವಿಸ್ತಾರಗೊಂಡ ರಂಗಪರಂಪರೆ ನಂತರದಲ್ಲಿ ಯಕ್ಷಗಾನ, ದೊಡ್ಡಾಟ, ಸಣ್ಣಾಟ, ಮೂಡಲಪಾಯ, ಹೀಗೆ ಹಲವಾರು ಜಾನಪದ ರಂಗಭೂಮಿ, ವೃತ್ತಿರಂಗಭೂಮಿ, ವಿಲಾಸಿ ರಂಗಭೂಮಿಗಳೆಂಬ ಕಲಾಪ್ರಕಾರಗಳ ವೈಭವದೊಂದಿಗೆ ಸಾಂಸ್ಕೃತಿಕ ಮೆರುಗನ್ನು ಪಡೆದವು.

ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ರಂಗಭೂಮಿಯ ಗರ್ಭದಿಂದಲೇ ತಂತ್ರಜ್ಞಾನದ ಉಡುಪನ್ನು ಧರಿಸಿ ಚಲನಚಿತ್ರರಂಗವು ಉದಯಗೊಂಡಿತು. ಸ್ವತಂತ್ರ ನೆಲೆಯಲ್ಲಿ ಈ ಕ್ಷೇತ್ರ ಬೆಳೆಯುತ್ತಿದ್ದರೂ ಅದರ ಸ್ವರೂಪ, ನಟನೆಯ ಶೈಲಿ, ಸಂಭಾಷಣೆ ಮತ್ತು ಕಥನ ಶೈಲಿಗಳಲ್ಲಿ ಅಷ್ಟೊಂದು ಬದಲಾವಣೆಯಾಗದೇ ರಂಗಭೂಮಿಯ ನೆರಳಲ್ಲೇ ಇದು ಬೆಳಗಿತ್ತು. ಆ ಕಾಲದ ಚಿತ್ರಗಳಲ್ಲಿ ರಂಗಭೂಮಿಯ ಕಲಾವಿದರ ಪಾರುಪತ್ಯವೇ ಇತ್ತು. ರಂಗಭೂಮಿಯ ಪ್ರಯೋಗಗಳು ಇಲ್ಲೂ ನಡೆಯುತ್ತಿದ್ದವು. ಕಲಾವಿದರು ಚಲನಚಿತ್ರದಲ್ಲಿ ನಟಿಸಿದರೂ ರಂಗಭೂಮಿ ಕಲಾವಿದ ಎಂದು ಗುರುತಿಸಿಕೊಳ್ಳುವುದರಲ್ಲಿ ಹೆಮ್ಮೆ ಪಡುತ್ತಿದ್ದರು. ಭಾರತೀಯ ಚಲನಚಿತ್ರ ಪರಂಪರೆ ಆರಂಭವಾದದ್ದು ದುಂಡಿರಾಜ್ ಗೋವಿಂದ ಫಾಲ್ಕೆ ನಿರ್ಮಿಸಿದ ರಾಜಾ ಹರಿಶ್ಚಂದ್ರ ಚಿತ್ರದ ಮೂಲಕ ಎಂಬುದು ಕೆ. ಪುಟ್ಟಸ್ವಾಮಿ ಅವರ ಅಭಿಪ್ರಾಯ. (ತುಂಬಿ ತಂದ ಗಂಧ – ಲೇಖಕ ಕೆ. ಪುಟ್ಟಸ್ವಾಮಿ – ವಾರ್ತಾಭಾರತಿ)

1929ರ ವಸಂತಸೇನಾ ಮೂಕಿಚಿತ್ರ ಹಾಗೂ ಕನ್ನಡದ ಮೊದಲ ವಾಕ್ಚಿತ್ರ ಸತಿ ಸುಲೋಚನಾವು ರಂಗಭೂಮಿಯ ಆಶಯಗಳನ್ನೇ ಪ್ರತಿಬಿಂಬಿಸಿ ವಿಧಾನದಲ್ಲಿ ಮಾತ್ರ ಚಲನಚಿತ್ರದ ಸ್ಥಾನ ಪಡೆಯಿತು. ನಂತರ ಸುದೀರ್ಘಕಾಲದವರೆಗೆ ಇದೇ ಪರಂಪರೆ ಮುಂದುವರಿಯಿತು. ಕಾಲಕ್ರಮೇಣ ಚಲನಚಿತ್ರ ತನ್ನದೇ ಆದ ದೃಶ್ಯಭಾಷೆಯನ್ನು ರೂಪಿಸಿಕೊಂಡಿತು. ಇದೇ ಸಂದರ್ಭದಲ್ಲಿ ರಂಗಭೂಮಿಯೂ ಆಧುನಿಕತೆಯತ್ತ ಹೊರಳಿ ಬೆಳಕು, ವೇಷಭೂಷಣ, ರಂಗಸಜ್ಜಿಕೆಗಳಲ್ಲಿ ಡಿಜಿಟಲ್ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಮೂಲ ಆಶಯಕ್ಕೆ ಧಕ್ಕೆಯಾಗದ ಹಾಗೇ ಅಭಿವ್ಯಕ್ತಿಯ ವ್ಯಾಪ್ತಿಯನ್ನು ವಿಸ್ತರಿಸಿತು. ಒಂದು ನಿರ್ದಿಷ್ಟ ಸ್ಥಳ, ಕಾಲಮಿತಿಯೊಳಗೆ ತಾನು ಹೇಳಬೇಕಾದ ಆಶಯವನ್ನು ನೇರವಾಗಿ ಒಂದೇ ಘಟ್ಟದಲ್ಲಿ ಹೇಳುತ್ತದೆ; ಮತ್ತೊಂದು ಬೇರೆ ಬೇರೆ ಸನ್ನಿವೇಶಗಳ ಚಿತ್ರೀಕರಣ ಬೇರೆ–ಬೇರೆ ಸ್ಥಳ, ಕಾಲ, ಕಥಾವಿನ್ಯಾಸದೊಂದಿಗೆ ನಡೆದು ಸಂಕಲನ ಕ್ರಮದೊಂದಿಗೆ ಸಂಯೋಜಿಸಿ, ಬೇಕಾದಾಗ ಮರುಸೃಷ್ಟಿಸಿ ಸಾವಿರಾರು ಪ್ರೇಕ್ಷಕರಿಗೆ ಒಂದೇ ರೀತಿಯ ಅನುಭವವನ್ನು ನೀಡುತ್ತದೆ.

ಒಟ್ಟಾರೆಯಾಗಿ ರಂಗಭೂಮಿ ಮತ್ತು ಚಲನಚಿತ್ರದ ಸೈದ್ಧಾಂತಿಕ ಮತ್ತು ಸಾಂಸ್ಥಿಕ ತುಲನೆಯಲ್ಲಿ ಈ ಕೆಳಗಿನ ಪ್ರಮುಖ ಅಂಶಗಳನ್ನು ಗುರುತಿಸಬಹುದು: ರಂಗಭೂಮಿಯಲ್ಲಿ ಕಲಾವಿದನು ಪಾತ್ರದ ಭಾವನೆಗಳನ್ನು ನೇರವಾಗಿ ಪ್ರೇಕ್ಷಕರಿಗೆ ತಲುಪಿಸಬೇಕಾಗುತ್ತದೆ. ಧ್ವನಿ ಏರಿಳಿತ, ದೇಹಭಾಷೆ, ಮುಖಭಾವ ಮತ್ತು ವೇದಿಕೆಯ ಮೇಲಿನ ಚಲನೆಗಳು ಹೆಚ್ಚು ಸ್ಪಷ್ಟವಾಗಿರಬೇಕು. ಇಲ್ಲಿ ರಿಟೇಕ್ ಎಂಬುದು ಸಾಧ್ಯವಿಲ್ಲ. ಪಾತ್ರದ ನಿರೂಪಣೆ ಕಲಾವಿದನ ಜಾಣ್ಮೆ ಮತ್ತು ಅರಿವಿನ ವ್ಯಾಪ್ತಿಯಲ್ಲಿ ವ್ಯವಹರಿಸುತ್ತದೆ. ಚಲನಚಿತ್ರದಲ್ಲಿ ಸಂಪಾದನೆಯ ಮೂಲಕ ಒಂದೇ ದೃಶ್ಯವನ್ನು ಹಲವು ಬಾರಿ ಚಿತ್ರೀಕರಿಸಿ ಪ್ರದರ್ಶಿಸಬಹುದು. ರಂಗಭೂಮಿಯ ಅಭಿನಯದಲ್ಲಿ ಜೀವಂತಿಕೆ ಪ್ರಮುಖವಾಗಿದ್ದರೆ, ಚಲನಚಿತ್ರದಲ್ಲಿ ಸೂಕ್ಷ್ಮತೆ ಮತ್ತು ತಾಂತ್ರಿಕ ನಿಖರತೆಯ ಅಂಶಗಳು ಪ್ರಮುಖವಾಗುತ್ತದೆ. ಈ ಸಂದರ್ಭದಲ್ಲಿ ಬಿ.ವಿ ಕಾರಂತರ ಮಾತು

ಅತ್ಯಂತ ಮುಖ್ಯವೆನಿಸುತ್ತದೆ. "ರಂಗಭೂಮಿ ಎಂದರೆ ನಟನ ದೇಹ, ಧ್ವನಿ, ಪ್ರೇಕ್ಷಕರ ನಡುವಿನ ಜೀವಂತ ಸಂಬಂಧದ ಕಲೆ; ತಂತ್ರಜ್ಞಾನ ಅದಕ್ಕೆ ಪೂರಕವಾಗಬಹುದು. ಪರ್ಯಾಯವಾಗಲಾರದು". ಈ ದೃಷ್ಟಿಯಿಂದ ನೋಡಿದರೆ ರಂಗಭೂಮಿಯ ಜೀವಂತಿಕೆಯನ್ನು ದೃಶ್ಯ ತಂತ್ರ ಸಂಪೂರ್ಣವಾಗಿ ಬದಲಿಸಲು ಸಾಧ್ಯವಿಲ್ಲ. ಇಲ್ಲಿ ಒಂದಂತೂ ಸ್ಪಷ್ಟ ಚಲನಚಿತ್ರ ಪಾತ್ರಗಳಿಗೆ ನ್ಯಾಯ ಒದಗಿಸುವುದು ರಂಗಭೂಮಿ ಕಲಾವಿದನಿಗೆ ತ್ರಾಸದಾಯಕವಲ್ಲವೆಂಬುದು ಒಂದರ್ಥದಲ್ಲಿ ರಂಗಭೂಮಿಯ ಹಿನ್ನೆಲೆಯಿಲ್ಲದ ಕಲಾವಿದ ರಂಗಭೂಮಿಯ ನಟನೆಯಲ್ಲಿ ಕಷ್ಟಪಡಬಹುದು; ಅಥವಾ ಸಂಪೂರ್ಣ ವಿಫಲನಾಗಬಹುದು. ಗುಬ್ಬಿ ಕಂಪನಿಯಲ್ಲಿ ವೃತ್ತಿ ಆರಂಭಿಸಿದ ಡಾ. ರಾಜ್‌ಕುಮಾರ್ ಅವರ ಸ್ಪಷ್ಟ ಉಚ್ಚಾರಣೆ, ಶಾರೀರಿಕ ಸೌಷ್ಠವ ಮತ್ತು ಅಭಿನಯದ ಪ್ರಬುದ್ಧತೆ ರಂಗಭೂಮಿಯಿಂದ ಪ್ರೇರಿತವಾಗಿದ್ದು, ಚಲನಚಿತ್ರದಲ್ಲೂ ಛಾಯಾಗ್ರಹಣದ ಸೂಕ್ಷ್ಮತೆಗೆ ಅನುಗುಣವಾಗಿ ತಮ್ಮ ನಟನೆಯನ್ನು ರೂಪಾಂತರಿಸಿಕೊಂಡವರು. ಈ ದಿಸೆಯಲ್ಲಿ ಕೆ. ಗುರುಮೂರ್ತಿ ಹಾರೋಹಳ್ಳಿಯವರ ಡಾ.ರಾಜ್‌ಕುಮಾರ್‌ರವರ ರಂಗಭೂಮಿ ಮತ್ತು ಚಲನಚಿತ್ರಗಳೆರಡರ ಬಾಂಧವ್ಯದ ಕುರಿತ ಸಂಶೋಧನೆ ಹೆಚ್ಚು ಗಮನಾರ್ಹವಾಗಿದೆ.

ರಂಗಭೂಮಿಯಲ್ಲಿ ಪ್ರೇಕ್ಷಕನು ಕೇವಲ ವೀಕ್ಷಕನಲ್ಲ: ಪ್ರದರ್ಶನದ ಸಕ್ರಿಯ ಸಹಭಾಗಿಯಾಗಿದ್ದು, ಅವನ ಪ್ರತಿಕ್ರಿಯೆಯೇ ಕಲಾವಿದನ ಅಭಿನಯದ ತೀವ್ರತೆಯನ್ನು ಪ್ರಭಾವಿಸುತ್ತದೆ. ಇದರಿಂದ "ಸಹಅನುಭವ" ನಿರ್ಮಾಣವಾಗುತ್ತದೆ. ಆದರೆ ಚಲನಚಿತ್ರದಲ್ಲಿ ಪ್ರೇಕ್ಷಕನು ಪೂರ್ಣಗೊಂಡ ಕೃತಿಯನ್ನು ವೀಕ್ಷಿಸುವುದರಿಂದ ಕಲಾವಿದ–ಪ್ರೇಕ್ಷಕರ ನೇರ ಸಂವಹನ ಇರುವುದಿಲ್ಲ, ಇಲ್ಲಿ ಮುಖ್ಯವಾಗಿ "ದೃಶ್ಯಾನುಭವ" ಉಂಟಾಗುತ್ತದೆ. ಈ ವ್ಯತ್ಯಾಸದಿಂದ ರಂಗಭೂಮಿಯ ಅನುಭವ ಹೊಂದಿರುವ ಕಲಾವಿದರು ಪಾತ್ರದ ಆಳ ಮತ್ತು ನೇರ ಅಭಿನಯದ ಸೂಕ್ಷ್ಮತೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಬಲ್ಲರು.

ಇಪ್ಪತ್ತೊಂದನೆಯ ಶತಮಾನದಲ್ಲಿ ರಂಗಭೂಮಿ ಮತ್ತು ಚಲನಚಿತ್ರಗಳ ಸಂಬಂಧವು ಕೇವಲ ಎರಡು ವಿಭಿನ್ನ ಕಲಾಮಾಧ್ಯಮಗಳ ನಡುವಿನ ಹೋಲಿಕೆಗೆ ಸೀಮಿತವಾಗಿಲ್ಲ. ತಂತ್ರಜ್ಞಾನ, ಜಾಗತೀಕರಣ, ಮಾರುಕಟ್ಟೆ ಸಂಸ್ಕೃತಿ, ಡಿಜಿಟಲ್ ಮಾಧ್ಯಮಗಳು ಮತ್ತು ಕೃತಕ ಬುದ್ಧಿಮತ್ತೆಯ ಪ್ರಭಾವದಿಂದ ಈ ಎರಡೂ ಮಾಧ್ಯಮಗಳು ತಮ್ಮ ಅಭಿವ್ಯಕ್ತಿ, ಕಥನಶೈಲಿ, ಪಾತ್ರ ನಿರ್ಮಾಣ ಹಾಗೂ ಪ್ರೇಕ್ಷಕರ ಅನುಭವದ ಸ್ವರೂಪವನ್ನು ಮರುರೂಪಿಸಿಕೊಂಡಿವೆ. ಕನ್ನಡ ರಂಗಭೂಮಿಯ ಪರಂಪರೆಯಿಂದ ರೂಪುಗೊಂಡ ಕನ್ನಡ ಚಲನಚಿತ್ರವು ಇಂದು ಜಾಗತಿಕ ಮಟ್ಟದಲ್ಲಿ ತನ್ನದೇ ಆದ ಸ್ಥಾನವನ್ನು ಗಳಿಸಿರುವುದು ಈ ಪರಿವರ್ತನೆಯ ಮಹತ್ವದ ಉದಾಹರಣೆಯಾಗಿದೆ.

ಈ ಹಿನ್ನೆಲೆಯಲ್ಲಿ ರಂಗಭೂಮಿ ಮತ್ತು ಚಲನಚಿತ್ರಗಳ ನಡುವಿನ ಸಾಮ್ಯ–ವೈಶಿಷ್ಟ್ಯಗಳನ್ನು ಕೇವಲ ವೇದಿಕೆ ಮತ್ತು ಪರದೆಯ ವ್ಯತ್ಯಾಸದ ನೆಲೆಯಲ್ಲಿ ನೋಡುವುದು ಸಮರ್ಪಕವಲ್ಲ. ಕಾಲ, ಸ್ಥಳ, ತಂತ್ರಜ್ಞಾನ, ಸಾಹಿತ್ಯ, ಸಾಮಾಜಿಕ ಹೊಣೆಗಾರಿಕೆ, ಪ್ರೇಕ್ಷಕರ ಅಭಿರುಚಿ ಮತ್ತು ಡಿಜಿಟಲ್ ಸಂಸ್ಕೃತಿಯ ದೃಷ್ಟಿಯಿಂದ ಅವುಗಳನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡುವ ಅಗತ್ಯವಿದೆ.

ರಂಗಭೂಮಿ ವೇದಿಕೆಯ ಮಿತಿಯೊಳಗೆ ಸಾಂಕೇತಿಕವಾಗಿ ಕಥೆಯನ್ನು ಕಟ್ಟಿದರೆ, ಚಲನಚಿತ್ರವು ಕಾಲ ಮತ್ತು ಸ್ಥಳದ ಎಲ್ಲ ಮಿತಿಗಳನ್ನು ಮೀರಿ ಅನೇಕ ದೇಶಗಳು, ಕಾಲಘಟ್ಟಗಳು ಹಾಗೂ ಕಲ್ಪಿತ ಲೋಕಗಳನ್ನು ಒಂದೇ ಕಥೆಯಲ್ಲಿ ನಿರೂಪಿಸುತ್ತದೆ. ಈ

ಸ್ವಾತಂತ್ರ್ಯವೇ ಚಲನಚಿತ್ರವನ್ನು ಜಾಗತಿಕ ಮಾಧ್ಯಮವನ್ನಾಗಿ ರೂಪಿಸಿದೆ. ರಂಗಭೂಮಿಯಲ್ಲಿ ತಂತ್ರಜ್ಞಾನ ಸಹಾಯಕ ಸಾಧನವಾಗಿದ್ದರೆ, ಚಲನಚಿತ್ರದಲ್ಲಿ ಅದು ಕಲಾಭಾಷೆಯ ಅವಿಭಾಜ್ಯ ಅಂಗವಾಗಿದೆ. CGI, VFX, ವರ್ಚುವಲ್ ಪ್ರೊಡಕ್ಷನ್, AI ಮೊದಲಾದ ತಂತ್ರಜ್ಞಾನಗಳು ದೃಶ್ಯ ನಿರೂಪಣೆಯ ಸ್ವರೂಪವನ್ನೇ ಬದಲಿಸಿವೆ. ಆದಾಗ್ಯೂ, ಆಧುನಿಕ ರಂಗಭೂಮಿಯೂ ಡಿಜಿಟಲ್ ಬೆಳಕು, ಪ್ರೊಜೆಕ್ಷನ್ ಹಾಗೂ ಮಲ್ಟಿಮೀಡಿಯಾದ ಮೂಲಕ ಹೊಸ ಕಲಾತ್ಮಕ ಸಾಧ್ಯತೆಗಳನ್ನು ಅಳವಡಿಸಿಕೊಂಡಿದೆ. Walter Benjamin ಅವರ The Work of Art in the Age of Mechanical Reproduction ಈ ತಾಂತ್ರಿಕ ಪರಿವರ್ತನೆಯನ್ನು ಅರ್ಥೈಸಲು ಮಹತ್ವದ ಸೈದ್ಧಾಂತಿಕ ನೆಲೆಯಾಗಿದೆ.

ರಂಗಭೂಮಿ ಇತಿಹಾಸದುದ್ದಕ್ಕೂ ಸಾಮಾಜಿಕ ಜಾಗೃತಿ ಮತ್ತು ಜನಸಂವಾದದ ವೇದಿಕೆಯಾಗಿತ್ತು. ಕನ್ನಡ ಚಿತ್ರರಂಗದ ಬೆಳವಣಿಗೆಯೂ ರಂಗಭೂಮಿಯ ಕಲಾವಿದರ ಕೊಡುಗೆಯ ಮೇಲೆ ನಿಂತಿದೆ. ಚಲನಚಿತ್ರವೂ ಸಮಾಜ ಪರಿವರ್ತನೆಯ ಪರಿಣಾಮಕಾರಿ ಮಾಧ್ಯಮವೇ ಆಗಿದ್ದರೂ, ವಾಣಿಜ್ಯೀಕರಣ ಮತ್ತು ಮಾರುಕಟ್ಟೆಯ ಒತ್ತಡದಿಂದ ಅನೇಕ ಚಿತ್ರಗಳು ಮನರಂಜನೆಗೆ ಹೆಚ್ಚಿನ ಒತ್ತು ನೀಡುತ್ತಿವೆ. ಆದಾಗ್ಯೂ ಕಾಂತಾರದಂತಹ ಕನ್ನಡ ಚಿತ್ರಗಳು ಸ್ಥಳೀಯ ಸಂಸ್ಕೃತಿ, ಮಾನವೀಯ ಸಂಬಂಧಗಳು ಹಾಗೂ ಸಾಮಾಜಿಕ ಪ್ರಶ್ನೆಗಳನ್ನು ಜಾಗತಿಕ ಮಟ್ಟಕ್ಕೆ ಪರಿಚಯಿಸಿರುವುದು ಗಮನಾರ್ಹವಾಗಿದೆ. ಆದರೆ ರಂಗಭೂಮಿ ಹಿನ್ನೆಲೆಯಲ್ಲಿ ಮೂಡಿದ ಚಲನಚಿತ್ರಗಳ ನಿರೂಪಣೆ ಶೈಲಿಯಲ್ಲಿ ಮೂಡಿದ ಪಾತ್ರಗಳು ಮನಸ್ಸಿಗೆ ಉಂಟು ಮಾಡುವ ಗಾಢ ಪರಿಣಾಮ ಇಂದಿನ ಚಿತ್ರಗಳಲ್ಲಿ ಇಲ್ಲ ಎಂಬುದೇ ನನ್ನ ಅನಿಸಿಕೆ. ಇವು ಮಳೆ ಬಂದು ನಿಂತ ಅನುಭವದಂತೆ. ಸಾಂಪ್ರದಾಯಿಕ ರಂಗಭೂಮಿಯಲ್ಲಿ ನಾಯಕನು ಧರ್ಮ, ನ್ಯಾಯ ಮತ್ತು ತ್ಯಾಗದ ಪ್ರತೀಕವಾಗಿದ್ದರೆ ಇಂದಿನ ಅನೇಕ ಚಲನಚಿತ್ರಗಳಲ್ಲಿ ಪ್ರತಿನಾಯಕ (Anti–hero) ಪ್ರವೃತ್ತಿ ಬೆಳೆಯುತ್ತಿದೆ. ನಾಯಕ ಮತ್ತು ಖಳನಾಯಕನ ನಡುವಿನ ನೈತಿಕ ಗಡಿ ಕ್ರಮೇಣ ಮಸುಕಾಗುತ್ತಿದೆ. ಹಾಗೆಯೇ ಹಿಂದಿನ ಖಳನಾಯಕನು ದುಷ್ಟಶಕ್ತಿಯ ಸಂಕೇತವಾಗಿದ್ದರೆ, ಇಂದಿನ ಚಲನಚಿತ್ರಗಳಲ್ಲಿ ಅವನ ಮನೋವಿಜ್ಞಾನ ಮತ್ತು ಜೀವನ ಹಿನ್ನೆಲೆಯನ್ನು ಸಮಾನವಾಗಿ ಕಟ್ಟಿಕೊಡಲಾಗುತ್ತಿದೆ. ಇದು ಪಾತ್ರ ನಿರ್ಮಾಣದ ಹೊಸ ಸಾಧ್ಯತೆಯಾದರೂ, ನೈತಿಕ ಗೊಂದಲಕ್ಕೂ ಕಾರಣವಾಗುತ್ತಿದೆ.

ರಂಗಭೂಮಿ ಸೀಮಿತ ಸಾಧನಗಳ ಮೂಲಕ ಪ್ರೇಕ್ಷಕರ ಕಲ್ಪನೆಯನ್ನು ಚೇತನಗೊಳಿಸಿ ವಾಸ್ತವಿಕತೆಯನ್ನು ನಿರ್ಮಿಸುತ್ತದೆ. ಆದರೆ ಸಮಕಾಲೀನ ಚಲನಚಿತ್ರದಲ್ಲಿ ದೃಶ್ಯ ವೈಭವ, ಗುರುತ್ವಾಕರ್ಷಣೆಯ ನಿಯಮಗಳನ್ನು ಮೀರುವ ಸಾಹಸ, ಗ್ರಾಫಿಕ್ಸ್ ಮೂಲಕ ಅತಿರಂಜನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಹಿಂಸೆ ಮತ್ತು ಕ್ರೌರ್ಯ ಅನಿವಾರ್ಯ ಎಂಬಂತೆ ಬಿಂಬಿಸಿ ರಕ್ತಪಾತ, ಪ್ರತಿಕಾರ, ದೈಹಿಕ ಶಕ್ತಿಯ ವೈಭವವನ್ನು ದೃಶ್ಯ ವೈಭವದೊಂದಿಗೆ ತೋರಿಸುವುದು. ಇದರಿಂದ ಮನರಂಜನೆ ಹೆಚ್ಚಾದರೂ, ಸಾಮಾಜಿಕ ವಾಸ್ತವಿಕತೆ ಹಿಂದೆ ಸರಿಯುವ ಅಪಾಯವಿದೆ. ಆದರೂ ತಿಥಿ ಹಾಗೂ ಮರಾಠಿಯ Court ಚಿತ್ರಗಳು ಸಹಜ ವಾಸ್ತವಿಕತೆಯತ್ತ ಮರಳಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

ಕನ್ನಡ ರಂಗಭೂಮಿ ಕುವೆಂಪು, ಶಿವರಾಮ ಕಾರಂತ್, ಕಂಬಾರರಂತಹ ಸಾಹಿತ್ಯ ಪರಂಪರೆಯಿಂದ ಸಮೃದ್ಧವಾಗಿದೆ. ಆರಂಭಿಕ ಕನ್ನಡ ಚಿತ್ರಗಳೂ ಸಾಹಿತ್ಯ ಆಧಾರಿತವಾಗಿದ್ದವು. ಆದರೆ ಇಂದಿನ ಅನೇಕ ವಾಣಿಜ್ಯ ಚಿತ್ರಗಳಲ್ಲಿ ಸಾಹಿತ್ಯಕ ಸಂಭಾಷಣೆಗಳ ಸ್ಥಾನವನ್ನು ಪಂಚ್ ಡೈಲಾಗ್‌ಗಳ ಮತ್ತು ವೇಗದ 'ಕಂಟೆಂಟ್' ಸಂಸ್ಕೃತಿ ಪಡೆದುಕೊಂಡಿವೆ. ಹಾಡುಗಳೂ ಕಥೆಯ ಅವಿಭಾಜ್ಯ ಅಂಗವಾಗಿರುವುದಕ್ಕಿಂತ ಮಾರುಕಟ್ಟೆ ಮತ್ತು ಪ್ರಚಾರದ ಸಾಧನಗಳಾಗುತ್ತಿರುವುದು

ಕಂಡುಬರುತ್ತದೆ.

ಮುಂದಿನ ದಶಕಗಳಲ್ಲಿ ರಂಗಭೂಮಿ ಮತ್ತು ಚಲನಚಿತ್ರ ಪ್ರಮುಖ ಸವಾಲುಗಳನ್ನು ಎದುರಿಸಬಹುದು. ತಂತ್ರಜ್ಞಾನ ಮತ್ತು ಮಾನವೀಯ ಸಂವೇದನೆಯ ಸಮತೋಲನ ಹಾಗೂ ವಾಣಿಜ್ಯ ಯಶಸ್ಸು ಮತ್ತು ಮೌಲ್ಯಗಳ ಸಂಘರ್ಷ, ತಂತ್ರಜ್ಞಾನದಿಂದ ಕಲಾವಿದನ ಸೃಜನಶೀಲತೆಯ ಮೇಲೆ ಆಗಬಹುದಾದ ಪರಿಣಾಮ. ಈ ಹಿನ್ನೆಲೆಯಲ್ಲಿ ಇಲ್ಲಿ ಕೆ.ವಿ. ಸುಬ್ಬಣ್ಣ ಅವರ ನಿನಾಸಂ ಮಾದರಿಯು ತೋರಿಸಿಕೊಟ್ಟಂತೆ ತಂತ್ರಜ್ಞಾನ ಬೆಳೆದರೂ ಕಲಾ ಮಾಧ್ಯಮಗಳು ಗ್ರಾಮೀಣ ಮತ್ತು ನಗರ ಸಂಸ್ಕೃತಿಗಳ ನಡುವೆ ಸೇತುವೆಯಾಗಿ ಕೆಲಸ ಮಾಡಬೇಕಾಗುತ್ತದೆ.

**ಪರಾಮರ್ಶನ ಗ್ರಂಥಗಳು:**

1. ರಂಗನಾಥ್ ಎಚ್. ಕೆ., (1978), ಕರ್ನಾಟಕ ರಂಗಭೂಮಿ, ಮೈಸೂರು: ಸುರುಚಿ ಪ್ರಕಾಶನ.
2. ಸಿಂಧುವಳ್ಳಿ ಅನಂತಮೂರ್ತಿ, ರಾಮನಾಥ್ ಎಚ್. ಕೆ. (ಸಂ.), (1984), ಕರ್ನಾಟಕ ರಂಗಭೂಮಿ ನಿನ್ನೆ–ಇಂದು–ನಾಳೆ, ಮೈಸೂರು: ಯೂನಿವರ್ಸಿಟಿ ಕಾಲೇಜ್ ಆಫ್ ಫೈನ್ ಆರ್ಟ್ಸ್ (ಮೈಸೂರು ವಿಶ್ವವಿದ್ಯಾನಿಲಯ).
3. ವಾಲ್ಟರ್ ಬೆಂಜಮಿನ್, (1935), The Work of Art in the Age of Mechanical Reproducibility.